# ೧೦ ನೆಯ ತರಗತಿಯ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ಎದುರಿಸಲು ಕೆಲವು ಸೂಚನೆಗಳು

## ಇಂಗ್ಲಿಷ್

೧. ಪಠ್ಯಪುಸ್ತಕದಲ್ಲಿರುವ ಎಲ್ಲ ಪಾಠ ಮತ್ತು ಪದ್ಯಗಳನ್ನು ಹಲವಾರು ಬಾರಿ, ಅತ್ಯಂತ ನಿಕಟವಾಗಿ ಓದಿರಬೇಕು. ಅಲ್ಲಿ ಕೊಟ್ಟಿರುವ ಪ್ರಮುಖ ಅಂಶಗಳನ್ನು ಖಂಡಿತ ನೆನಪಿನಲ್ಲಿಡಬೇಕು. ೨. ಪ್ರತಿ ಪಾಠ ಮತ್ತು ಪದ್ಯಗಳ ಕೆಳಗೆ ಕೊಟ್ಟಿರುವ ಕ್ಲಿಷ್ಟಪದಗಳ ಅರ್ಥವನ್ನು ಬರೆದು ಒಂದು ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವುದು ಉತ್ತಮ. ೩. ಕನಿಷ್ಠ ಹತ್ತು ಬೇರೆ ಬೇರೆ ಬಗೆಯ ಪತ್ರಗಳ ಮಾದರಿಯನ್ನು ಸಂಗ್ರಹಿಸಿ ಬರೆದಿಟ್ಟುಕೊಂಡರೆ, ಬಹಳ ಉತ್ಸಾಹದಿಂದ ಪತ್ರಲೇಖನ ಪ್ರಶ್ನೆಯನ್ನು ಎದುರಿಸಬಹುದು. ೪. ಸುಮಾರು ಹದಿನೈದು ವಿಷಯಗಳಿಗೆ ಸಂಬಂಧಿಸಿದಂತೆ ಕಿರು ಪ್ರಬಂಧಗಳನ್ನು ಬರೆದು ಸಿದ್ಧವಾಗಿದ್ದರೆ, ನಿಮ್ಮದೇ ಆಯ್ಕೆಯಿಂದ ಪ್ರಶ್ನೆಪತ್ರಿಕೆಯಲ್ಲಿರುವ ನಿಗದಿತ ಜಾಗದಲ್ಲಿ ಬರೆದು ಮುಗಿಸುವುದು ಸುಲಭ. ವಿಷಯವು ಸಮಾಜಶಾಸ್ತ್ರ ಅಥವಾ ವಿಜ್ಞಾನಕ್ಕೆ ಸಂಬಂಧಿಸಿದ್ದಾದರೆ, ಆಯಾ ಅಂಶಗಳನ್ನು ಕ್ರೋಡೀಕರಿಸಿ ಇಂಗ್ಲಿಷ್ ಪತ್ರಿಕೆಯಲ್ಲೂ ಬರೆಯಬಹುದು. ೫. ವ್ಯಾಕರಣಕ್ಕೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳ ಮಾದರಿಗಳಲ್ಲೂ ಸಾಕಷ್ಟು ಅಭ್ಯಾಸಮಾಡಿ ಪಳಗಿರಬೇಕು. ೬. ಇಂಗ್ಲಿಷ್ ಪಠ್ಯ ಮತ್ತು ಪ್ರಶ್ನೋತ್ತರಗಳನ್ನು ಕೇವಲ ಓದಿದರೆ ಸಾಲದು, ಜೊತೆಜೊತೆಗೇ ಸಾಕಷ್ಟು ಬಾರಿ ಬರೆದು ಅಭ್ಯಾಸ ಮಾಡಿದರೆ ಕಾಗುಣಿತ (Spelling) ದಲ್ಲಿ ಆಗುವ ತಪ್ಪುಗಳು ಆಗುವುದಿಲ್ಲ ಮತ್ತು ಸೂಕ್ತವಾದ ಪದಗಳನ್ನೇ ಬಳಸಿ ವಾಕ್ಯರಚನೆ ಮಾಡುವುದು ರೂಢಿಯಾಗುತ್ತದೆ. ೭. ಪುನರಾವರ್ತನೆಯನ್ನು ಕಡ್ಡಾಯವಾಗಿ ಮಾಡಬೇಕು. ಇದರಿಂದ ಭಯವು ಹೋಗಿ ವಿಶ್ವಾಸ ಮೂಡುತ್ತದೆ. ೮. ನಿಗದಿತವಾದ ನಾಲ್ಕು ಪದ್ಯಗಳಲ್ಲಿ ಮೂರು ಪದ್ಯಗಳನ್ನು ಕರಾರುವಕ್ಕಾಗಿ ಕಂಠಪಾಠ ಮಾಡಿರಲೇ ಬೇಕು. ಈ ಪ್ರಶ್ನೆಯು ಬಂದೇ ಬರುವುದರಿಂದ ನಮ್ಮ ಸಿದ್ಧತೆಯನ್ನು ಸ್ವಲ್ಪ ಎಚ್ಚರಿಕೆಯಿಂದ ನಡೆಸಬೇಕು. ೯. ಕೊಟ್ಟಿರುವ ಸ್ಥಳದಲ್ಲಿ ಮಾತ್ರ ಬರೆದು ಮುಗಿಸುವ ಅಭ್ಯಾಸವನ್ನು ಮೊದಲಿನಿಂದಲೂ ಮಾಡಿರಬೇಕು. ಇದರಿಂದ ಕಾಲ ನಿರ್ವಹಣೆಯು ಸುಲಭವಾಗುತ್ತದೆ. ಬರವಣಿಗೆಯು ದುಂಡಾಗಿ, ಸ್ಪಷ್ಟವಾಗಿದ್ದು ಸರಾಗವಾಗಿ ಓದುವಂತಿರಬೇಕು. ೧೦. ಬಹು ಆಯ್ಕೆಯ ಪ್ರಶ್ನೆಗಳನ್ನು ಜಾಗರೂಕತೆಯಿಂದ ಓದಿ ಅರ್ಥ ಮಾಡಿಕೊಂಡು, ಉತ್ತರವನ್ನು ಆರಿಸಬೇಕು. ಆತುರದಿಂದ ಓದಿ, ಬರೆದರೆ ತಪ್ಪು ಮಾಡುವ ಸಂಭವವಿರುತ್ತದೆ.

– ಎಸ್. ಆರ್. ರಮೇಶ್, ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು

## ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ

೧.ಎಲ್ಲಾ ಅಧ್ಯಾಯಗಳಲ್ಲಿ ಬರುವ ಚಿತ್ರಗಳನ್ನು ಪುಸ್ತಕವನ್ನು ನೋಡದೆಯೇ ಪುನ: ಪುನ: ಬರೆದು ಭಾಗಗಳನ್ನು ಗುರುತಿಸಬೇಕು. ೨. ಭೌತ ಶಾಸ್ತ್ರದ ಎಲ್ಲಾ ಅಧ್ಯಾಯಗಳನ್ನು ಒಂದು ದಿನ ಓದಿ, ನಂತರ ಅದೇ ದಿನ ಹಲವು ಪ್ರಶ್ನೆಪತ್ರಿಕೆಗಳನ್ನು ತೆಗೆದುಕೊಂಡು ಉತ್ತರಿಸಿ. ಇದೇ ರೀತಿ ರಸಾಯನ ಶಾಸ್ತ್ರದ ಅಧ್ಯಾಯಗಳನ್ನು ಓದಿ ಪ್ರಶ್ನೆಪತ್ರಿಕೆಗೆ ಉತ್ತರಿಸಿ. ೩. ರಸಾಯನ ಶಾಸ್ತ್ರದಲ್ಲಿ ಬರುವ ಎಲ್ಲಾ ಸಮೀಕರಣಗಳನ್ನು ಒಂದು ಹಾಳೆಯಲ್ಲಿ ಬರೆದಿಟ್ಟುಕೊಂಡು, ಅವುಗಳನ್ನು ನೋಡದೆಯೆ ಬರೆಯಲು ಅಭ್ಯಾಸ ಮಾಡಿಕೊಳ್ಳಿ. ೪. ಕಬ್ಬಿಣ ಹಾಗು ತಾಮ್ರಗಳನ್ನು ಅದರ ಅದಿರಿನಿಂದ ಬೇರ್ಪಡಿಸುವ ವಿಧಾನ ಹಾಗೂ ಸಮೀಕರಣಗಳನ್ನು ಪುನ: ಪುನ: ಬರೆದು ಅಭ್ಯಾಸ ಮಾಡಿ. ೫. ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರಿಸುವಾಗ ಒಂದರ ನಂತರ ಇನ್ನೊಂದರಂತೆ ಮುಖ್ಯವಾದ ಅಂಶಗಳನ್ನು ಬರೆಯಿರಿ. ೬. ರಸಾಯನ ಶಾಸ್ತ್ರದಲ್ಲಿ ಬರುವ ಸಾಮಾನ್ಯ ಸೂತ್ರಗಳನ್ನು ಅರ್ಥ ಮಾಡಿಕೊಂಡು ಅಭ್ಯಾಸ ಮಾಡುತ್ತಿರಬೇಕು ಮತ್ತು ಅದಕ್ಕೆ ಸಂಬಂಧಪಟ್ಟ ಅಣುಸೂತ್ರಗಳು ಹಾಗೂ ಅಣುರಚನಾ ಸೂತ್ರಗಳನ್ನು ಮತ್ತೆ ಮತ್ತೆ ಬರೆದು ಅಭ್ಯಾಸ ಮಾಡುತ್ತಿರಬೇಕು. ೭. ಪಾಠದಲ್ಲಿ ಬರುವ ಎಲ್ಲಾ ನಿಯಮಗಳನ್ನು, ನಿರೂಪಣೆಗಳನ್ನು ಹಾಗೂ ಹೇಳಿಕೆಗಳನ್ನು ಒಂದು ಕಡೆ ಬರೆದಿಟ್ಟುಕೊಂಡು ಪುನಃ ಪುನಃ ಮನನ ಮಾಡಿಕೊಳ್ಳಬೇಕು. ೮. ಪ್ರತಿಯೊಂದು ಪ್ರಶ್ನೆಪತ್ರಿಕೆಯಲ್ಲೂ ಅನ್ವಯ ಮಾದರಿಯ ಪ್ರಶ್ನೆಗಳಿರುವುದರಿಂದ ಆ ರೀತಿಯ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧತೆ ಮಾಡಿಕೊಳ್ಳಿ. ಉದಾ: *ವ್ಯತ್ಯಾಸ ಬರೆಯುವುದು, ಕಾರಣ ಗುರುತಿಸುವುದು* ಇತ್ಯಾದಿ ೯. ಕ್ಲಿಷ್ಟಕರ ವಿಷಯಕ್ಕೆ ಹೆಚ್ಚು ಮತ್ತು ಮೊದಲ ಆದ್ಯತೆ ನೀಡಿ, ಸಾಕಷ್ಟು ಮುಂಚೆಯೇ ಪರೀಕ್ಷೆಗೆ ಸಿದ್ಧರಾಗಿ. ೧೦. ನಿಮಗೆ ಅರ್ಥವಾಗದೆ ಇರುವ ವಿಷಯವನ್ನು ಅಧ್ಯಾಪಕರ ಸಹಾಯದಿಂದ ಅಥವಾ ನಿಮ್ಮ ಸ್ನೇಹಿತರ ಸಹಾಯದಿಂದ ಕೇಳಿ ತಿಳಿದುಕೊಂಡು, ಅರ್ಥ ಮಾಡಿಕೊಳ್ಳಿ.

**ವಿಶೇಷ ಸೂಚನೆ: _**

೧. ಅಭ್ಯಾಸ ಮಾಡುವಾಗ ಮೊದಲೇ ಆಯ್ಕೆ ಮಾಡಿಕೊಂಡ ಒಂದೇ ಪುಸ್ತಕವನ್ನು ಪುನ: ಪುನ: ಅಭ್ಯಾಸ ಮಾಡಿದರೆ ಒಳ್ಳೆಯದು. ಹಲವಾರು ಪುಸ್ತಕಗಳನ್ನು ಓದುವುದರಿಂದ ಗೊಂದಲಕ್ಕೊಳಗಾಗುತ್ತೀರಿ. ೨. ಬಹು ಆಯ್ಕೆ ಪ್ರಶ್ನೆ (MCQ)ಗಳಿಗೆ ಉತ್ತರಿಸಲು ಪ್ರತಿ ಅಧ್ಯಾಯದ ಮುಖ್ಯವಾದ ಅಂಶಗಳ ಪಟ್ಟಿಯನ್ನು ಮಾಡಿ, ಅಧ್ಯಾಯದ ಪ್ರಕಾರ ಸಿದ್ಧತೆ ನಡೆಸಿ ೩. ಓದಿರುವ ಪಾಠಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಚರ್ಚಿಸುವುದರಿಂದ (ಗುಂಪು ಚರ್ಚೆ) ವಿಷಯಗಳು ಮರೆತುಹೋಗುವುದಿಲ್ಲ. ಇದನ್ನು ಪರೀಕ್ಷೆಗಿಂತ ಮುಂಚೆಯೇ ಮಾಡಿಕೊಳ್ಳಬೇಕು. ೪. ಪ್ರಶ್ನೆಪತ್ರಿಕೆಯನ್ನು ಸಮಗ್ರವಾಗಿ ಓದಿ ನಂತರವೇ ಉತ್ತರ ಬರೆಯಲು ಪ್ರಾರಂಭಿಸಿ; ಸುಲಭವಾದ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ. ಬಹು ಆಯ್ಕೆ ಪ್ರಶ್ನೆಗಳಿಗೆ (MCQ) ಉತ್ತರಿಸುವಾಗ ಯಾವ ಯಾವ ಆಯ್ಕೆಗಳು ಸರಿಯಲ್ಲ ಎಂಬುದನ್ನು ಖಾತ್ರಿ ಮಾಡಿಕೊಳ್ಳಿ.

– ಶ್ರೀ ಕೆ.ಎನ್. ಪಾಂಡುರಂಗ ಜೋಯಿಸ್, ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು

## ಗಣಿತ

೧. ಗಣಿತವನ್ನು ಮಾಡಿ ಕಲಿಯಬೇಕೇ ಹೊರತು, ಓದುವುದರಿಂದಲ್ಲ. ೨. ಹೆದರಿಕೆ ಬರುವುದು ಅಭ್ಯಾಸದ ಕೊರತೆಯಿಂದ. ಅದಕ್ಕಾಗಿ ಪರೀಕ್ಷೆಗೆ ಮುನ್ನ ಹಳೆಯ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಅವಧಿಯಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿ ಪೂರ್ವಸಿದ್ಧತೆ ಮಾಡುವುದು ಬಹುಮುಖ್ಯ. ೩. ಅಭ್ಯಾಸ ಮಾಡಿದ ಲೆಕ್ಕಗಳನ್ನು ಮನನ ಮಾಡಿ ಮತ್ತೆ ಮತ್ತೆ ಪುನರಾವರ್ತನೆಯನ್ನು ಮಾಡುವುದರಿಂದ ಹೆಚ್ಚು ಕಾಲ ಮನಸ್ಸಿನಲ್ಲಿ ಉಳಿಯುತ್ತದೆ. ೪. ಪರೀಕ್ಷೆ ನಡೆಯುವ ಒಂದು ತಿಂಗಳ ಮೊದಲು ಸ್ನೇಹಿತರೊಡನೆ ಹರಟೆಗೆ ಅವಕಾಶ ಕೊಡದೆ, ಪರೀಕ್ಷೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವುದು ಒಳ್ಳೆಯದು. ೫. 'ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ.' ಆದ್ದರಿಂದ ನೆನ್ನೆಗಿಂತ ನೀವು ಇಂದು ಎಷ್ಟು ಉತ್ತಮವಾಗಿದ್ದೀರಿ ಎಂದು ನಿಮ್ಮನ್ನು ನೀವೇ ಹೋಲಿಸಿಕೊಂಡು ಏಳ್ಗೆಯನ್ನು ಸಾಧಿಸಬೇಕು. ೬. ಪರೀಕ್ಷೆಗೆ ಹೊರಡುವ ಮುನ್ನ ಎಲ್ಲಾ ಸಾಮಗ್ರಿಗಳು ( ಪೆನ್ನು, ಪೆನ್ಸಿಲ್, ರೇಖಾ ಗಣಿತದ ಪೆಟ್ಟಿಗೆ, ಪ್ರವೇಶ ಪತ್ರ ಇತ್ಯಾದಿ) ಇದೆಯೇ ಎಂದು ಖಾತರಿಪಡಿಸಿಕೊಳ್ಳಬೇಕು. ೭. ಪ್ರಶ್ನೆಪತ್ರಿಕೆಯನ್ನು ಓದುವಾಗ ಒಂದು ವೇಳೆ ಮೊದಲ ಒಂದೆರಡು ಪ್ರಶ್ನೆಗಳು ಕಷ್ಟವಾಗಿ ಕಂಡಾಗ ಗಾಬರಿಗೊಳ್ಳಬೇಡಿ. ಇದರಿಂದ ಗೊತ್ತಿರುವ ಲೆಕ್ಕಗಳೂ ಮರೆತು ಹೋಗುವ ಸಾಧ್ಯತೆಗಳಿರುತ್ತವೆ. ಮುಂದಿನ ಪ್ರಶ್ನೆಗಳನ್ನು ಓದಿ ಚೆನ್ನಾಗಿ ಗೊತ್ತಿರುವ ಲೆಕ್ಕಗಳನ್ನು ಮೊದಲು ಮಾಡಿ. ೮. ಉತ್ತರಿಸುವಾಗ ಒಂದು ಅಂಕದ ಪ್ರಶ್ನೆಗಳನ್ನು ಉತ್ತರಿಸುವ ಮೊದಲು, ಎರಡು ಅಥವಾ ನಾಲ್ಕು ಅಂಕಗಳ ಪ್ರಶ್ನೆಗಳನ್ನು ಉತ್ತರಿಸುವುದು ಉತ್ತಮ. ೯. ವಿವರಣಾತ್ಮಕ ಪ್ರಶ್ನೆಗಳನ್ನು ಉತ್ತರಿಸುವಾಗ ಪ್ರಶ್ನೆ ಪತ್ರಿಕೆಯಲ್ಲಿ ಬಿಟ್ಟಿರುವ ಖಾಲಿ ಜಾಗವನ್ನು ಗಮನಿಸಿ, ಅದಕ್ಕೆ ಸರಿಯಾಗಿ ಹೊಂದುವಂತೆ ನಿಮ್ಮ ಉತ್ತರವನ್ನು ಹಂತ ಹಂತವಾಗಿ ಬಿಡಿಸಿ ಬರೆಯಿರಿ. ೧೦. ಲೆಕ್ಕಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸ್ಪಷ್ಟವಾಗಿ ಬಿಡಿಸಿ ಭಾಗಗಳನ್ನು ಹೆಸರಿಸಿ, ವಿವರಣೆಯನ್ನು ಚಿತ್ರಕ್ಕೆ ಹೊಂದುವಂತೆ ಬರೆಯಿರಿ. ೧೧. ಆವರಣ ಚಿಹ್ನೆಗಳನ್ನು ಸರಿಯಾದ ಸ್ಥಳದಲ್ಲಿ ಹಾಕಬೇಕು. ಇಲ್ಲವಾದಲ್ಲಿ ಉತ್ತರ ಬೇರೆಯಾಗುವುದು.

ಉದಾ: **$180 - (90 + 10) = 80$ ; $180(-90 + 10) = -14400$**

೧೨. ಉತ್ತರಗಳು ಪೂರ್ಣವಾಗಿರಬೇಕು, ಅಂದರೆ ಪರಿಮಾಣಗಳೊಂದಿಗಿರಬೇಕು.

ಉದಾ: AB = 10 cm ; ABC = 70° ಬಿಡ್ಡಿ ; 150 **ರೂಪಾಯಿಗಳು, ಇತ್ಯಾದಿ**

(AB = 10, ABC = 70, ಬಿಡ್ಡಿ = 150 ಎಂದು ಬರೆಯಬಾರದು)

**೧೩. ಪ್ರತಿ ಅಧ್ಯಾಯದಲ್ಲಿ ಬರುವ ಸೂತ್ರಗಳನ್ನು ಪಟ್ಟಿ ಮಾಡಿಕೊಂಡು ನೆನಪಿನಲ್ಲಿ ಇಟ್ಟುಕೊಂಡರೆ, ಒಂದು ಅಂಕದ ಪ್ರಶ್ನೆಗಳಿಗೆ ಸುಲಭವಾಗಿ ಮತ್ತು ಬೇಗ ಉತ್ತರಗಳನ್ನು ಬರೆಯಬಹುದು.** ೧೪. ಪರೀಕ್ಷಾ ಕೊಠಡಿಯಲ್ಲಿ ಒಂದು ಗಂಟೆ ಬರೆದ ನಂತರ ನೀವು ಬರೆದಿರುವ ಉತ್ತರಗಳನ್ನು ಒಮ್ಮೆ ಪುಟ ತಿರುಗಿಸಿ ನೋಡಿ ಚೆನ್ನಾಗಿ ಬರೆದಿದ್ದೇನೆಂದು ಮನಸ್ಸಿನಲ್ಲಿ ಭಾವಿಸಿಕೊಳ್ಳಿ. ಇದರಿಂದ ಮನಸ್ಥೈರ್ಯ ಉಂಟಾಗಿ ಉಳಿದ ಲೆಕ್ಕಗಳನ್ನು ಮಾಡುವುದು ಸುಲಭವಾಗುತ್ತದೆ. ೧೫.ಪರೀಕ್ಷಾ ಸಮಯದಲ್ಲಿ ನಿಮ್ಮ ಆರೋಗ್ಯ ಬಹಳ ಮುಖ್ಯ. ಅದಕ್ಕಾಗಿ ಒಳ್ಳೆಯ ಆಹಾರ ಸೇವಿಸಿ ಸರಿಯಾದ ಸಮಯಕ್ಕೆ ವಿಶ್ರಾಂತಿ ಪಡೆದು ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಳ್ಳಿ.

– ಎಸ್.ಪಿ. ಸುರೇಶ್, ಶ್ರೀರಾಮಕೃಷ್ಣ ವಿದ್ಯಾಶಾಲೆ, ಮೈಸೂರು

## ಜೀವಶಾಸ್ತ್ರ

೧. ಪಠ್ಯಪುಸ್ತಕದಲ್ಲಿರುವ ಎಲ್ಲ ಅಧ್ಯಾಯಗಳನ್ನೂ ಓದಿ, ನಂತರ ಹಲವು ಪ್ರಶ್ನೆಪತ್ರಿಕೆಗಳನ್ನು ನಿಗದಿತ ಸಮಯದಲ್ಲಿ ಉತ್ತರಿಸಿ ಅಭ್ಯಾಸ ಮಾಡಿಕೊಳ್ಳಿ. ೨. ಸಸ್ಯಗಳು ಮತ್ತು ಪ್ರಾಣಿಗಳ ದೇಹರಚನೆಯನ್ನು ಒಂದು ಕಡೆ ಪಟ್ಟಿ ಮಾಡಿಟ್ಟುಕೊಳ್ಳಿ. ಆಗ ಅದು ಮರೆಯುವುದಿಲ್ಲ. ೩.ಸಸ್ಯ ಮತ್ತು ಪ್ರಾಣಿಗಳ ಅಂಗಾಂಶಗಳ ರಚನೆ, ಅವು ಕಂಡು ಬರುವ ಭಾಗಗಳು ಮತ್ತು ಕಾರ್ಯಗಳ ಒಂದು ನಕಾಶೆ ತಯಾರಿಸಿ ಅಭ್ಯಾಸ ಮಾಡಬೇಕು. ಏಕೆಂದರೆ ಇದರಲ್ಲಿ ಗೊಂದಲ ಉಂಟಾಗುವ ಸಾಧ್ಯತೆಗಳು ಜಾಸ್ತಿ. ೪. ಕೇಂದ್ರ ನರವ್ಯೂಹ ಮತ್ತು ಜ್ಞಾನೇಂದ್ರಿಯಗಳ ಮೇಲಿನ ಪ್ರಶ್ನೆ ಬಂದೇ ಬರುತ್ತದೆ. ಆದ್ದರಿಂದ ಈ ಭಾಗವನ್ನು ಜಾಗರೂಕತೆಯಿಂದ ಓದಿ, ಅರ್ಥ ಮಾಡಿಕೊಂಡು ಉತ್ತರಿಸಿರಿ. ೫. ನಿರ್ನಾಳ ಗ್ರಂಥಿಗಳು ಮಾನವ ದೇಹದ ಚಟುವಟಿಕೆಗಳ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಎಚ್ಚರಿಕೆಯಿಂದ ಓದಿ, ಅರಿತುಕೊಂಡು ಉತ್ತರಿಸಬೇಕು. ೬. ಸಾಸುವೆ ಗಿಡ (ದ್ವಿದಳ ಸಸ್ಯ), ಹೂವಿನ ಚಿತ್ರ, ಎಲೆಗಳಲ್ಲಿ ನಾಳ ವಿನ್ಯಾಸಗಳು, ಬೇರಿನ ವ್ಯವಸ್ಥೆ, ಮೀನಿನ ಬಾಹ್ಯ ರಚನೆ, ಪೇರಂಕೈಮ, ಕೋಲೆಂಕೈಮ, ನ್ಯೂರಾನ್, ಮನುಷ್ಯನ ಮಿದುಳಿನ ನೀಳ ಛೇದ ನೋಟ, ಮಿದುಳು ಬಳ್ಳಿ, ಪರಾವರ್ತಿತ ಚಾಪ, ಕಣ್ಣುಗುಡ್ಡೆಯ ನೀಳ ಛೇದ ನೋಟ, ಕಿವಿಯ ರಚನೆ, ಹೆಚ್. ಐ.ವಿ ಯ ರಚನೆ –ಇವುಗಳ ಕುರಿತಾದ ಚಿತ್ರಗಳನ್ನು ಪುಸ್ತಕವನ್ನು ನೋಡದೆಯೇ ಪುನಃ ಪುನಃ ಬರೆದು ಭಾಗಗಳನ್ನು ಗುರುತಿಸಿ ಅಭ್ಯಾಸ ಮಾಡಿ. ಇದರಿಂದ ಸುಲಭವಾಗಿ ೬ ಅಂಕಗಳನ್ನು ಪಡೆಯಬಹುದು. ೭. ಏಡ್ಸ್ ಮತ್ತು ಹೆಪಟೈಟಸ್ – ಬಿ ರೋಗಗಳ ಲಕ್ಷಣಗಳು, ಸೋಂಕು ತಗಲುವ ರೀತಿ, ಅವುಗಳ ನಿಯಂತ್ರಣದ ಬಗ್ಗೆ ಒಂದು ನಕಾಶೆಯನ್ನು ತಯಾರಿಸಿ ಅಧ್ಯಯನ ಮಾಡಿ. ೮. ಆಹಾರದಲ್ಲಿರುವ ಕಲಬೆರಕೆ ಪದಾರ್ಥಗಳು, ಅವುಗಳನ್ನು ಕಂಡುಹಿಡಿಯಲು ಉಪಯೋಗಿಸುವ ಕೆಲವು ಪರೀಕ್ಷೆಗಳು, ಸರ್ಕಾರ ಜಾರಿಗೆ ತಂದಿರುವ ಆಹಾರ ಕಲಬೆರಕೆ ಕಾನೂನು – ಇವುಗಳನ್ನು ಬಹು ಆಯ್ಕೆ ಪ್ರಶ್ನೆಗಳಿಗೆ(MCQ) ಕೇಳುವುದರಿಂದ ಅವುಗಳ ಮಾಹಿತಿಯನ್ನು ತಿಳಿದುಕೊಂಡಿದ್ದರೆ, ಸುಲಭವಾಗಿ ಅಂಕಗಳನ್ನು ಪಡೆಯಬಹುದು. ೯. ಸಸ್ಯಗಳು ಮತ್ತು ಪ್ರಾಣಿಗಳ ಪರಸ್ಪರ ಅವಲಂಬನೆ, ಜೀವಭೂರಸಾಯನಿಕ ಚಕ್ರ, ಪರಿಸರ ಮಾಲಿನ್ಯದ ಬಗೆಗಳು ಹಾಗೂ ಅವುಗಳಿಗೆ ಪರಿಹಾರ – ಇವುಗಳನ್ನು ಅರ್ಥ ಮಾಡಿಕೊಂಡು, ಪ್ರಶ್ನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರ ಬರೆಯಿರಿ. ೧೦. ನಿಮಗೆ ಗೊಂದಲವುಂಟಾಗುವ ಪಾಠಗಳ ಬಗ್ಗೆ ನಿಮ್ಮ ಸ್ನೇಹಿತರೊಡನೆ ಚರ್ಚೆ ಮಾಡುವುದರಿಂದ ವಿಷಯಗಳು ಮರೆತುಹೋಗುವುದಿಲ್ಲ.

– ಡಾ. ಬಿ. ಆರ್. ಸುಬ್ರಮಣ್ಯ, ಸದ್ವಿದ್ಯಾ ಕಾಂಪೋಸಿಟ್ ಜೂನಿಯರ್ ಕಾಲೇಜ್, ಮೈಸೂರು